ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶುಕ್ರವಾರ ದಿನಾಂಕ ೧೪ನೇ ಅಕ್ಟೋಬರ್ ೧೯೮೮ ಆಶ್ವಯುಜ, ೨೨, ೧೯೧೦, ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧–೦೬ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದರು].

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು.—ಪ್ರಶ್ನೆ ಸಂ. ೫೦೩೫. ಶ್ರೀ ಎಂ. ಎಸ್. ಕೃಷ್ಣನ್.

ಸದಸ್ಯರು ಗೈರುಹಾಜರಿದ್ದರಂ

ಅಧ್ಯಕ್ಷರು.—ಶ್ರೀ ಕೆ. ವಸಂತ ಬಂಗೇರ

ಸದಸ್ಯರು ಗೈರುಹಾಜರಿದ್ದರು

ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಆಧುನಿಕ ಕಸಾಯಿಖಾನೆ ಸ್ಥಾಪನೆ

೨೯೭೪. ಶ್ರೀ ಬಿ. ಲಕ್ಕಪ (ಚಿಕ್ಕನಾಯಕನ ಹಳ್ಳಿ).–ಮಾನ್ಯ ರೇಷ್ಮೆ ಮಂತ್ತು ಪಶುಸಂಗೋಪನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಆಧುನಿಕ ಕಸಾಯಿಖಾನೆಯನ್ನು ನಿರ್ಮಿಸುತ್ತಿರುವುದು ನಿಜವಲ್ಲವೆ?

ಆ) ಇದಕ್ಕಾಗಿ ಎಷ್ಟು ಎಕರೆ ಜಮೀನನ್ನು ಹಾಗೂ ಯಾವ ಸ್ಥಳದಲ್ಲಿ ನೀಡಲಾಗಿದೆ ?

ಇ) ಇದರ ನಿರ್ಮಾಣದ ಅಂದಾಜು ವೆಚ್ಚವೆಷ್ಟು? ಈಗ ಒದಗಿಸಲಾಗಿರುವ ಹಣವೆಷ್ಟು ?

ಈ) ಅಭಾವ ಪೀಡಿತ ಪ್ರದೇಶಗಳಿಗೆ ಹಣ ಒದಗಿಸುವ ಅವಶ್ಯಕತೆ ಇದ್ದರೂ ಹಣ ಒದಗಿಸಲಾಗದಿರುವಾಗ ಈ ಕಸಾಯಿಖಾನೆಗೆ ಹಣ ಒದಗಿಸುವ ಅವಶ್ಯಕತೆ ಏನಿತ್ತು? ಕಾರಣ ಕೊಡುವುದು ?

ಶ್ರೀ ಕೃಷ್ಣ (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು).—

ಅ) ನಿಜ

ಆ) ಬೆಂಗಳೂರು ಉತ್ತರ ತಾಲ್ಲೂಕ್ ಕಾಚರಕನಹಳ್ಳಿಯ ಕೆರೆಯ ಅಂಗಳದಲ್ಲಿ ೫೭ ಎಕರೆ ೨೬ ಗುಂಟೆ ಅಳತೆಯುಳ್ಳ ಜಮೀನನ್ನು ಆಧುನಿಕ ಕಸಾಯಿಖಾನೆ ನಿರ್ಮಿಸಲು ನೀಡಲಾಗಿದೆ.

ಇ) ಇದರ ಅಂದಾಜು ವೆಚ್ಚವು ರೂ. ೫೯೦ ಲಕ್ಷ ರಾಜ್ಯ ಸರ್ಕಾರ ೫೭.೨೬ ಎಕರೆ ಭೂಮಿಯನ್ನು ಮತ್ತು ನಗದಾಗಿ ೭ ೫೦ ಲಕ್ಷ ರೂ. ಕೊಟ್ಟಿರುತ್ತದೆ. ಕೇಂದ್ರ ಸರ್ಕಾರವು ೧೪೫ ಲಕ್ಷ ಕೊಡಬೇಕಾಗಿದ್ದು ಈಗ ೧೫ ಲಕ್ಷ ರೂ. ಕೊಟ್ಟಿರುತ್ತದೆ, ಬೆಂಗಳೂರು ಮಹಾನಗರ ಪಾಲಿಕೆಯವರು ೫೭.೫೦ ಲಕ್ಷ ಕೊಡಬೇಕಾಗಿದ್ದು ಈಗ ೭ ೫೦ ಲಕ್ಷ ರೂ, ಕೊಟ್ಟಿರುತ್ತಾರೆ, ಒಟ್ಟು ಅಂದಾಜು ವೆಚ್ಚದಲ್ಲಿ ಮಿಕ್ಕ ೨೯೦ ಲಕ್ಷ ರೂ. ನಬಾರ್ಡ್ ಮೂಲಕ, ಬ್ಯಾಂಕ್‌ನಿಂದ ಸಾಲ ಪಡೆಯಲಾಗುವುದು.

ಈ) ಈಗಿರುವ ಕಸಾಯಿ ಖಾನೆಗಳು ನಗರದ ಮಧ್ಯದ ಇಕ್ಕಟ್ಟಿನ ಜಾಗದಲ್ಲಿದ್ದು ಆರೋಗ್ಯಕರವಾದ ಮಾಂಸ ಉತ್ಪಾದನೆಗೆ ಅನಾನುಕೂಲವಾಗಿರುವುದಲ್ಲದೆ ಅಲ್ಲಿ ಅವುಗಳ ಸುಧಾರಣೆಗೆ ಅವಕಾಶ ವಿಲ್ಲದೆ ಇರುವುದರಿಂದ ನಗರದ ಹೊರವಲಯಕ್ಕೆ ಸ್ಥಳಾಂತರಿಸಲು ಯೋಜಿಸಿ ಆಧುನಿಕ ಕಸಾಯಿಖಾನೆಯಂನ್ನು ನಿರ್ಮಾಣ ಮಾಡಲಂ ನಿರ್ಧರಿಸಲಾಗಿದೆಯಷ್ಟೆ.

ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಆಧುನಿಕ ಕಸಾಯಿಖಾನೆ ಸ್ಥಾಪನೆ ಬಗ್ಗೆ

೩೦೧೭. ಶ್ರೀ ಸ್ವಾಮಿರಾವ್ (ಪೊಸಗನಗರ).–ಮಾನ್ಯ ರೇಷ್ಮೆ ಮತ್ತು ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನಲ್ಲಿ ಕಸಾಯಿಖಾನೆ ನಿರ್ಮಾಣ ಆಗುತ್ತಿರುವುದು ನಿಜವೆ ?

ಆ) ಪರವಾನಿಗೆ ಯಾರಿಗೆ ಹಾಗೂ ಯಾವಾಗ ಕೊಡಲಾಯಿತು ?

ಇ) ಒಂದು ದಿನಕ್ಕೆ ಕಸಾಯಿಖಾನೆಯಿಂದ ಎಷ್ಟು ಪ್ರಾಣಿಗಳು ವಧೆಯಾಗುತ್ತಿದೆ?

ಶ್ರೀ ಕೃಷ್ಣ, (ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು).—

ಅ) ನಿಜ

ಆ) ಆಧುನಿಕ ಕಸಾಯಿಖಾನೆಯನ್ನು ನಿರ್ಮಿಸಬೇಕೆಂಬ ಮುಖ್ಯ ಉದ್ದೇಶದಿಂದಲೇ ಈ ನಿಗಮವನ್ನು ೧೯೭೪ನೇ ಸಾಲಿನಲ್ಲಿ ಕರ್ನಾಟಕ ಸರ್ಕಾರವು ಬೆಂಗಳೂರು ಮಹಾನಗರಪಾಲಿಕೆಯ ಮತ್ತು ಕೇಂದ್ರ ಸರ್ಕಾರದ ಸಹಮತಿಯೊಂದಿಗೆ ಕರ್ನಾಟಕ ಸರ್ಕಾರದ ಉದ್ದಿಮೆಯಾಗಿ ಸ್ಥಾಪಿಸಿರುತ್ತದೆ.

ಇ) ಒಂದು ದಿನಕ್ಕೆ ೩,೦೦೦ ಕುರಿ, ಮೇಕೆ, ೩೦೦ ಎತ್ತು ಮತ್ತು ಕೋಣ ಮತ್ತು ೧೦೧ ಹಂದಿಗಳ ವಧೆಗೆ ಅನುಕೂಲವಾಗುವಂತೆ ಆಧುನಿಕ ಕಸಾಯಿಖಾನೆಯನ್ನು ಯೋಜಿಸಲಾಗಿದೆ.

ಪ್ರಶ್ನೆ ನಂ. ೧೦೭೦ (೨೯೭೪) ಮತ್ತು ೧೦೭೯ (೩೦೧೭)

ಅಧ್ಯಕ್ಷರು.—ಇವೆ ರ್ನಿಂದು ಪ್ರಶ್ನೆಯನ್ನು ಶ್ರೀ ಎಸ್. ಸ್ವಾಮಿರಾವ್‌ರವರು ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಆಧುನಿಕ ಕಸಾಯಿಖಾನೆ ಸ್ಥಾಪನೆ ಬಗ್ಗೆ ಕೇಳಿದ್ದಾರೆ. ಅವರು ತಮ್ಮ ಪ್ರಶ್ನೆಗೆ ಉಪ ಪ್ರಶ್ನೆಯನ್ನು ಕೇಳುವುದಕ್ಕೆ ಶ್ರೀ ಜಿ. ಎಂ. ಕಾನಡೆಯವರಿಗೆ ತಿಳಿಸಿದ್ದಾರೆ. ಅವರ ಪರವಾಗಿ ಮಾನ್ಯ ಕಾನಡೆಯವರೇ ತಾವೇ ಕೇಳಿ.

ಶ್ರೀ ಬಿ. ಲಕ್ಕಪ್ಪ.—ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಆಧುನಿಕ ಕಸಾಯಿಖಾನೆ ಸ್ಥಾಪನೆಯ ಬಗ್ಗೆ ಅನೇಕ ಸಂಘ ಸಂಸ್ಥೆಗಳು, ಅನೇಕ ರಾಜಕಾರಣಿಗಳು ಮಂತ್ರಿ ಜನತೆ ಇದನ್ನು ವಿರೋಧ ಮಾಡಿದ್ದಾರೆ. ಈಗ ತಮಿಳುನಾಡು ಹಾಗೂ ಕೇರಳ ರಾಜ್ಯಗಳಲ್ಲೂ ಕೂಡ ಆಧುನಿಕ ಕಸಾಯಿಖಾನೆಯನ್ನು ತೆರೆಯುವ ಬಗ್ಗೆ ಲೈಸನ್ಸ್‌ನ್ನು ಕೊಡುತ್ತಿಲ್ಲ. ಹೀಗಿರುವಾಗ ಶಾಂತಿಪ್ರಿಯವಾಗಿರತಕ್ಕ ರಾಜ್ಯದ ರಾಜಧಾನಿಯಾದ ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಆಧುನಿಕ ಕಸಾಯಿಖಾನೆಯನ್ನು ತೆರೆಯುವುದಕ್ಕೆ ಅವಕಾಶ ಕೊಟ್ಟಿರುವಂತಹದ್ದು ಸರಿಯೇ? ಇದನ್ನು ಯಾರ ಕಾಲದಲ್ಲಿ ಲೈಸನ್ಸ್ ಕೊಡಲಾಗಿದೆ? ಬೆಂಗಳೂರು ನಗರವನ್ನು ಆಧುನಿಕ ಚಿಕಾಗೋವನ್ನಾಗಿ ಮಾಡಬೇಕೆಂಬ ಅಭಿಪ್ರಾಯ ಈ ಸರ್ಕಾರಕ್ಕೆ ಇದೆಯೇ? ಈ ಒಂದು ಪ್ರಯತ್ನವನ್ನು ಈಗಲಾದರೂ ಈ ಜನತೆಯ ಒತ್ತಡದಿಂದ, ಹಾಗೂ ಸಂಘ ಸಂಸ್ಥೆಗಳ ಒತ್ತಡದಿಂದ, ಅನೇಕ ರಾಜಕೀಯ ನಾಯಕರುಗಳ ವಿರೋಧ ಇರುವುದರಿಂದ, ಈ ಪ್ರಯತ್ನವನ್ನು ಕೈಬಿಡಲಾಗುವುದೇ ?

ಶ್ರೀ ಕೃಷ್ಣ.—ಅಧ್ಯಕ್ಷರೇ, ಕಸಾಯಿಖಾನೆಯನ್ನು ಹೊಸದಾಗಿ ಪ್ರಾರಂಭ ಮಾಡುತ್ತಿದ್ದೇವೆ ಎನ್ನುವುದು ಸರಿಯಲ್ಲ. ಈಗಾಗಲೇ ೪ ಕಸಾಯಿಖಾನೆಗಳು ಬೆಂಗಳೂರು ನಗರದ ಒಳಗೆ ಕೆಲಸ ಮಾಡುತ್ತಿವೆ, ಇವು ೫೦ ವರ್ಷಕ್ಕಿಂತಲೂ ಹಿಂದೆ ಆರಂಭವಾಗಿದ್ದು ಇಲ್ಲಿ ಸ್ಥಳದ ಅಭಾವ ಇದ್ದು ಒಳ್ಳೆಯ ರೀತಿಯ ಶುಚಿತ್ವವನ್ನು ಕಾಪಾಡುವುದಕ್ಕೆ ಆಗುತ್ತಿಲ್ಲ. ಆದ್ದರಿಂದ ಕೇಂದ್ರಸರ್ಕಾರ ಹಾಗೂ ಮಹಾ